## 10

# ಬೈಬಲಿನಲ್ಲಿರುವ ದೇವರ ಉದ್ದೇಶ

ನಾವು ಏನು ಮಾಡಿದರು ಅದನ್ನು "ಕರ್ತನಾದ ಯೇಸುವಿನ ಹೆಸರಿನಲ್ಲೆ" ಮಾಡಬೇಕು. ಯಾಕಂದರೆ, ಅದನ್ನು ಆತನು ಅಧಿಕೃತಪಡಿಸಿದ್ದಾನೆ. ಯೇಸುವಿನ ಅಧಿಕಾರವನ್ನು ಹೊರತುಪಡಿಸಿ, ನಾವು ಏನನ್ನೂ ಮಾಡಬಾರದು.

*ಎಲ್ಲವುಗಳ* ಬಗ್ಗೆ ಆತನ ವಾಕ್ಯವು ಮಾತನಾಡದೇ ಇರುವಾಗ, ನಾವು ಹೇಗೆ ಆ ಕಾರ್ಯಗಳನ್ನು ಮಾಡಬೇಕು? ಈ ಜೀವಿತದ ಸಕಲ ಕಾರ್ಯಕ್ಕೂ ಸಂಬಂಧಪಡುವ *ತತ್ವಗಳಿಂದ* ನಾವು ಮಾರ್ಗದರ್ಶನ ಪಡೆಯಬೇಕು. ಜನರ ಪ್ರತಿದಿನದ ಜೀವಿತದಲ್ಲಿ ಮಾಡುವ ಎಲ್ಲಾ ಕಾರ್ಯಗಳ ಬಗ್ಗೆ ಬೈಬಲ್ ನೇರವಾಗಿ ಏನನ್ನೂ ಹೇಳುವದಿಲ್ಲ. ಯಾಕಂದರೆ ಅದು ಅವರ ಜೀವನ ಕ್ರಮವಾಗಿದೆ, ಕ್ರಿಸ್ತನ ವಾಕ್ಯವು ಇವೆಲ್ಲಕ್ಕೂ ಸಂಬಂಧಪಟ್ಟಿದೆ ಎಂಬುದನ್ನು ನಾವು ನಂಬಬೇಕು.

ಅನೇಕ ಬೋಧಕರು, ತಮ್ಮ ಚರ್ಚೆಗಳ ಬಗ್ಗೆ, ತಮ್ಮ ವಿದ್ಯಾರ್ಥಿಗಳಿಗೆ ಸಮಂಜಸವಾದ ಉತ್ತರವನ್ನು ನೀಡುವದಿಲ್ಲ. ಹೇಗೂ ಒಬ್ಬ ಉಪದೇಶಕನು ತಾನು ಮಾತನಾಡಿರುವ ಸಕಲ ವಿಷಯಕ್ಕೂ ಕಾರಣ ನೀಡಲು ಸಾಧ್ಯವಿಲ್ಲ, ಅಂದರೆ, ಉಪದೇಶಕನ ಮಾತುಗಳನ್ನು ವಿದ್ಯಾರ್ಥಿಗಳು ಅರ್ಥೈಸುವಲ್ಲಿ ಮಿಥವ್ಯಯ ಕಂಡುಬಂದರೆ, ಅವರ ಅರ್ಥವನ್ನು ಅವನು ತಿಳಿಸದೆ ಹೋದರೆ, ಅವನ ಹೇಳಿಕೆಯ ನಿರ್ಣಯಕ್ಕೆ ಬರುವುದು ಅಸಾಧ್ಯವಾಗುತ್ತದೆ. ದೇವರ ವಾಕ್ಯವನ್ನು ಸರಿಯಾದ ರೀತಿಯಲ್ಲಿ ಅಭ್ಯಾಸ ಮಾಡದೆ ಇರುವುದೇ ಇದಕ್ಕೆ ಕಾರಣವಾಗುತ್ತದೆ. ವಿದ್ಯಾರ್ಥಿಗಳು ತಾವು ಕೇಳಿರುವ ಕೆಲವು ಸಂಗತಿಗಳನ್ನು ಪ್ರಸಂಗಿಯು ಅನರ್ಥವಾಗಿ ಬೋಧಿಸಿರುವನು ಎಂಬ ನಿರ್ಣಯಕ್ಕೆ ಬರುವಾಗ, ಪ್ರಸಂಗಿಯು, ಇವರೆಲ್ಲರೂ ಅದನ್ನು ಅರಿತಿರುವರು ಎಂದು ಯೋಚಿಸಿದರೆ, ಗಂಭೀರವಾದ ಸಮಸ್ಯೆಯು ಉದ್ಭವಿಸುತ್ತದೆ. ವಿದ್ಯಾರ್ಥಿಗಳು ಅರಿತುಕೊಂಡು ಒಂದು ಒಳ್ಳೆಯ ನಿರ್ಣಯಕ್ಕೆ ಬರುವಂತೆ, ಉಪದೇಶಕರು ತಮ್ಮ ಚರ್ಚೆಯನ್ನು ನೀಡಬೇಕು.

ಬೈಬಲ್ ಅಧ್ಯಾಯದಲ್ಲಿ ತರ್ಕಬದ್ಧವಾದ ಕ್ರಮವನ್ನು ಅನುಸರಿಸಬೇಕು. ಇದರಿಂದ ಬೈಬಲ್ ಉಪದೇಶಗಳನ್ನು ಸರಿಯಾದ ರೀತಿಯಲ್ಲಿ ನಿರ್ಣಯಿಸಬಹುದು ಮತ್ತು ಅವುಗಳನ್ನು ಉತ್ತಮವಾಗಿ ಅರ್ಥಮಾಡಿಕೊಳ್ಳಬಹುದು. ಈ ಕಾರಣದಿಂದ, ಅಲಕ್ಷ್ಯಕ್ಕೆ ಒಳಗಾಗಿರುವ ಕೆಲವು ಮೂಲಭೂತ ಸಂಗತಿಗಳನ್ನು ಬೈಬಲ್‌ನಿಂದ ಅಧ್ಯಯನ ಮಾಡೋಣ.

## ಬೈಬಲಿನಲ್ಲಿರುವ ದೇವರನ್ನು ಅರಿಯುವ ಉದ್ದೇಶವನ್ನು ಪ್ರತಿಸ್ಪಂದನ ಮಾಡೋಣ

ಪ್ರಥಮವಾಗಿ, ಬೈಬಲ್ ಮಾನವನಿಗೆ ದೇವರ ಚಿತ್ತವನ್ನು ಪ್ರಕಟಿಸುತ್ತದೆ, ಮತ್ತು ಬೈಬಲನ್ನು ನಾವು ಏಕೆ ಒಪ್ಪಿಕೊಳ್ಳಬೇಕು ಎಂದು ಅಭ್ಯಾಸಿಸೋಣ. ಕ್ರೈಸ್ತರಾದ ನಾವು ಈ ವಿಷಯವನ್ನು ತಿಳಿದು, ಈ ಬರವಣಿಗೆಯ ಪಾಠವನ್ನು ಮುಂದುವರಿಸೋಣ.

ಉದಾಹರಣೆಗೆ, ಒಂದು ಕ್ಷಣ, ನಂಬದೆ ಇರುವವರಿಗೆ, ವಿವರಣೆ ನೀಡಲು ನಮ್ಮನ್ನು ಆಹ್ವಾನಿಸಿದರೆ, ನಾವು ಆ ವ್ಯಕ್ತಿಗೆ ಯಾವ ಸಲಹೆಯನ್ನು ನೀಡುತ್ತೇವೆ? ಬೈಬಲ್ ಇತರ ಪುಸ್ತಕಗಳಂತೆ ಇರುವದಿಲ್ಲ ಎಂದು ಅವನಿಗೆ ಮನವರಿಕೆ ಮಾಡುವುದೇ ನಿಮ್ಮ ಅಂತಿಮ ಉದ್ದೇಶವಾಗಿರುತ್ತದೆ. ಅವನು ತಾನೇ ಬೈಬಲನ್ನು ಹುಡುಕುವಂತೆ ಮಾಡಬೇಕು. ಬೈಬಲಿನ

ವಿಶೇಷ ಗುಣಗಳು, ಮಾನವನ ಮೂಲವನ್ನು ಹೊಂದಿರುವದಿಲ್ಲವೆಂದು ಅವನಿಗೆ ಮನನ ಮಾಡಬೇಕು. ಅವನು ಒಂದು ಮರ್ಮವನ್ನು ಬಿಡಿಸುವಂತೆ, ಬೈಬಲನ್ನು ಅಭ್ಯಾಸ ಮಾಡಬೇಕು. ಈ ಬೈಬಲಿನ ಗುಣಾತಿಶಯಗಳು ಒಂದ ಸಾರಿ ಗೋಚರವಾಗಿದೆ, ಮತ್ತು ಈ ಪುಸ್ತಕವು - ಇತರೆ ಪುಸ್ತಕಗಳಂತೆ ಇರದೆ - ದೇವರಿಂದಲೇ ಬಂದದ್ದು ಎಂದು ಉತ್ತೇಜನ ಮಾಡಬೇಕಾಗುತ್ತದೆ.

ದೇವರು, ಬರವಣಿಗೆಯ ಮೂಲಕ ಏಕೆ ತನ್ನ ಚಿತ್ತವನ್ನು ಪ್ರಕಟಪಡಿಸಿರುವನು ಎಂದು ನೋಡೋಣ. ಬೈಬಲ್ ದೇವರಿಂದಲೇ ಬಂದದ್ದು ಎಂದು ನಾವು ನಿರೂಪಿಸುವಂತೆ ಮುಂದುವರಿಯಬೇಕು. ನಾವು ಅದರ ಸಾಕ್ಷ್ಯಾಧಾರಗಳನ್ನು ಅಭ್ಯಾಸಿಸಬೇಕು. *ಅದನ್ನು ನಾವು ಬೈಬಲಿನಲ್ಲಿಯೇ ಕಂಡುಕೊಳ್ಳುತ್ತೇವೆ,* ಇದರಿಂದ ದೇವರು ಹೇಗಿದ್ದಾನೆ ಮತ್ತು ಈ ಉಪದೇಶಗಳಿಂದ ಏನು ಮಾಡುತ್ತಾನೆ ಎಂಬುದನ್ನು ಅರಿಯೋಣ. ದೇವರ ಉದ್ದೇಶದ ಪ್ರಕಟನೆಯನ್ನು ಪ್ರಮುಖವಾಗಿ ನೋಡೋಣ. ಆ ಕುರಿತ ದೇವರ ಮಾತಿನ ಸಂಪರ್ಕವನ್ನು ಸಹ ಗಮನಿಸೋಣ.

ದೇವರು ತನ್ನನ್ನು ಪ್ರಕಟಿಸಿಕೊಳ್ಳುವದಕ್ಕೋಸ್ಕರ, *ಉದ್ದೇಶಿತ ವಾಕ್ಯಗಳನ್ನು ನೀಡಿರುವನು.* ತನ್ನ ನಿಯಮಾವಳಿಗಿಂತಲೂ, ಹೆಚ್ಚಾಗಿ ಆತನನ್ನು ನಾವು ಅರಿಯಬೇಕೆಂದು *ಬಯಸುತ್ತಾನೆ.*[1] ಯೆರಮಿಯ 31:31-34, ಇಸ್ರಾಯೇಲ್ಯರೊಂದಿಗಿದ್ದ ಒಡಂಬಡಿಕೆಯನ್ನೂ ಬದಲು ಮಾಡುವ ದಿವಸವು ಬರುವದೆಂದು, ದೇವರು ವಾಗ್ದಾನ ಮಾಡಿರುವನು. ಆ ಹೊಸ ಒಡಂಬಡಿಕೆಯು ಆತನನ್ನು ಅರಿಯಲು *ಸಹಾಯಿಸುತ್ತದೆ* ಎಂದು ಹೇಳಿರುವನು (ನೋಡಿರಿ ವಚನ 34). ಇಬ್ರಿಯ 8:7-13 ಯೇಸುವಿನಲ್ಲಿ ಮಾಡಿರುವ ಹೊಸ ಒಡಂಬಡಿಕೆಯೇ ಯೆರೆಮಿಯ 31ರಲ್ಲಿ ಇರುವುದು. ನಾವು ಆತನನ್ನು *ಅರಿಯುವುದೇ* ಆತನ ಉದ್ದೇಶವಾಗಿದೆ.

ಯೇಸು ಆ ಉದ್ದೇಶವನ್ನು ಮಂದುವರೆಸಿದ್ದಾನೆ. ಯೋಹಾನ 17:1-5ರಲ್ಲಿ, ದೇವರು ಆತನಿಗೆ ನೇಮಿಸಿದ ಕೆಲಸವನ್ನು ಸಂಪೂರ್ಣ ಮಾಡುವದರ ಮೂಲಕ ದೇವರನ್ನು ಮಹಿಮೆ ಪಡಿಸಲು ಬಂದನು ಎಂದು ಬರೆಯಲಾಗಿದೆ. ವಚನ 3ರಲ್ಲಿ ಕಾರಣಗಳನ್ನು ನೀಡಲಾಗಿದೆ: ಅದೇನಂದರೆ "ನಿತ್ಯಜೀವವನ್ನು ತರುವುದೇ" ನಿತ್ಯಜೀವದ ವಿವರಣೆಯನ್ನು ಯೇಸು ಯಾವ ರೀತಿ ವಿಮರ್ಷಿಸಿದನು? ಆತನನ್ನು ತಿಳಿದು ಮತ್ತು ಆತನನ್ನು ಕಳುಹಿಸಿಕೊಟ್ಟಾತನನ್ನು ನಂಬುವದರಿಂದಲೇ.

ದೇವರ ಚಿತ್ತವನ್ನು ಅರಿಯುವದಕ್ಕೆ, ಈ ಮೇಲಿನ ಉದ್ದೇಶಗಳು ಸಹಕರಿಸುತ್ತವೆ ಆತನನ್ನು ಅರಿಯುವುದೆ, ಆತನ ಚಿತ್ತವೆಂದು ತಿಳಿದ ನಂತರ, ಅದನ್ನು ನಿಯಮವೆಂದು ಪಾಲಿಸದೆ, ಅದನ್ನು ವಿಶೇಷವೆಂದು ತಿಳಿದು ಸಂಪರ್ಕಿಸಬೇಕು. ಪರಿಶುದ್ಧಾತ್ಮನಿಂದ ಪ್ರಕಟಿತಗೊಂಡ ಉದ್ದೇಶವು "ದೇವರ ಆಲೋಚನೆಗಳನ್ನು" ತಿಳಿಯಲು ಸಹಾಯಿಸುತ್ತದೆ (1 ಕೊರಿಂಥ 2:9-13). ಈ ಆತ್ಮನ ವಾಕ್ಯಗಳನ್ನು ಒಪ್ಪಿಕೊಂಡ ನಂತರ, "ನಾವು ಕ್ರಿಸ್ತನ ಮನಸ್ಸನ್ನು ಹೊಂದಿಕೊಳ್ಳಲು" ಸಾಧ್ಯವಾಗುತ್ತದೆ (1 ಕೊರಿಂಥ 2:14-16; ನೋಡಿರಿ ಫಿಲಿಪ್ಪಿ 2:5; ಕೊಲೊಸ್ಸೆ 3:1, 2).

ನಾವು ಆತನನ್ನು ಅರಿಯಬೇಕೆಂದು ದೇವರು ಬಯಸುತ್ತಾನೆ (ಯೋಹಾನ 17:3). ನಾವು ಆತನ "ಪರಿಶುದ್ಧತೆಯಲ್ಲಿ ಪಾಲುದಾರರಾಗಬೇಕೆಂದು" ಬಯಸುತ್ತಾನೆ (ಇಬ್ರಿಯ 12:10) ಮತ್ತು "ಆತನ ಮಗನ ಸಾರೂಪ್ಯಕ್ಕೆ ಪರಿವರ್ತನೆಗೊಳ್ಳಬೇಕು" (ರೋಮಾಪುರ 8:29; 2 ಕೊರಿಂಥ 3:18 ನೋಡಿ), ಆತನು ದೇವರ ಪ್ರತಿ ರೂಪವಾಗಿದ್ದಾನೆ (ಕೊಲೊಸ್ಸೆ 1:15). ದೇವರ ಈ ವಯಕ್ತಿಕ ಸ್ವಭಾವಗಳು, ನಾವು ಆತನನ್ನು ಅರಿಯುವದಕ್ಕೆ ಸಹಾಯಿಸುತ್ತವೆ.

## ಗ್ರಂಥಗಳಲ್ಲಿನ ತನ್ನ ಉದ್ದೇಶಗಳನ್ನು ದೇವರು ಯಾವ ರೀತಿಯಲ್ಲಿ ಸಾಧಿಸುತ್ತಾನೆ

ಬೈಬಲ್ ನಿಯಮಗಳ ಪುಸ್ತಕವಲ್ಲ (ಅದರಲ್ಲಿ ನಿಯಮಗಳು ಒಳಗೊಂಡಿವೆ);

*ಮಾನವನೊಂದಿಗಿನ ದೇವರ ಅನ್ಯೋನ್ಯತೆಯ ಕುರಿತಾಗಿ ಬರವಣಿಗೆಯಲ್ಲಿನ ಪಾಠಗಳನ್ನು ನೀಡಲಾಗಿದೆ.* ಇದರಿಂದ ದೇವರೊಂದಿಗಿನ ಅನ್ಯೋನ್ಯತೆ ಸಾಧ್ಯ ಎಂಬುದನ್ನು ಸಾಬೀತು ಪಡಿಸಲಾಗಿದೆ. ಬೈಬಲಿನ ಬರವಣಿಗೆಯ ನಿರ್ಮಾಣವನ್ನು ಆಲೋಚಿಸಿರಿ. ಒಂದು ವೇಳೆ ದೇವರು ಬೈಬಲನ್ನು ನಿಯಮದ ಪುಸ್ತಕವನ್ನಾಗಿ ನೀಡಿದ್ದರೆ, ಮೂರು ವಿಧದ ವ್ಯತ್ಯಾಸಗಳನ್ನು ಅದರಲ್ಲಿ ಕಾಣುತ್ತೇವೆ.

ಮೊದಲನೆಯದಾಗಿ, ಪ್ರತಿಯೊಂದು ಸಂಗತಿಗೂ ಒಂದು ನಿಯಮದ ಅಗತ್ಯವಿರುವದರಿಂದ, ಆ ಪುಸ್ತಕವು ದೊಡ್ಡದಾಗಿರಬೇಕಾಗುತ್ತದೆ. ಒಂದು ವೇಳೆ ನಾಲ್ಕನೇಯ ಶತಮಾನದಲ್ಲಿ ಜೀವಿಸಿದ ಜನರಿಗೆ ಒಂದು ಭಾಗದ ನಿಯಮಗಳು ಅನ್ವಯಿಸಬಹುದು. ಹದಿನೈದನೆಯ ಶತಮಾನದವರಿಗೆ ಇನ್ನೊಂದು ಭಾಗವು ಅನ್ವಯಿಸಬಹುದು. ಮತ್ತೊಂದು ಭಾಗವು ಇಪ್ಪತ್ತೊಂದನೇ ಶತಮಾನದವರಿಗೆ ಅನ್ವಯಿಸಬಹುದು, ಮತ್ತು ಇನ್ನೊಂದು ಭಾಗವು ಇಪ್ಪತ್ತ - ನಾಲ್ಕನೆಯ ಶತಮಾನದವರಿಗೂ ಇರಬಹುದು.

ವಿವಿಧ ಸಮಯಗಳ ಆಡಳಿತಕ್ಕಾಗಿ ನೇಮಕವಾಗಿರುವ ನಿಯಮಗಳು, ಎಲ್ಲಾ ವಿಧವಾದ ಸಾಧ್ಯ ಆ ಸಾಧ್ಯತೆಗಳನ್ನು ಪರಿಹರಿಸಲು ಸಾಧ್ಯವಿಲ್ಲ. ಪ್ರಪಂಚದಲ್ಲಿರುವ ವ್ಯತ್ಯಾಸಗಳ ಕುರಿತು ಆಲೋಚಿಸಿರಿ. ಗಣಕಯಂತ್ರಗಳ ವಿಸ್ತಾರವಾದ ಉಪಯೋಗಕ್ಕೂ ಮತ್ತು ಉನ್ನತ ವೈದ್ಯಕೀಯ ಜ್ಞಾನಕ್ಕೂ ವಿವಿಧವಾದ ನಿಯಮಗಳನ್ನು ನಮ್ಮ ದೇಶದವರು ಉಪಯೋಗಿಸುತ್ತಾರೆ.[2] ಪ್ರಪಂಚದ ಇತರ ಭಾಗದ ಜನರು ಮುಂದುವರೆದಿರುವ ತಾಂತ್ರೀಕ ತಿಳುವಳಿಕೆಯನ್ನು ನೋಡಿರುವುದಿಲ್ಲ. ಪ್ರತಿ ಪರಿಸ್ಥಿತಿಗೂ ಮತ್ತು ಸಮಯಕ್ಕೂ ಬೈಬಲ್ ನಿಯಮಗಳನ್ನು ನೀಡಬೇಕಾಗಿದ್ದರೆ, ಒಂದು ಬೈಬಲ್‌ನ ಬರವಣಿಗೆಯು ಸಾಲದೆ ಇದ್ದು, ಒಂದು ಪುಸ್ತಕಗಳ ಗ್ರಂಥಾಲಯವೇ ಬೇಕಾಗುತ್ತದೆ. ಜ್ಯಾಕ್ P. ಲೀವೀಸ್‌ರವರು, "ಒಂದು ವೇಳೆ ಕರ್ತನು ಜನರು ಮಾಡಲಾರದ ಸಕಲ ಕಾರ್ಯಗಳನ್ನು ಪಟ್ಟಿ ಮಾಡಿರುವುದಾದರೆ, ಗ್ರಂಥಾಲಯದಲ್ಲಿರುವ ಎಲ್ಲಾ ಪುಸ್ತಕಗಳು ಬರವಣಿಗೆಗೆ ಸಾಲದೆ ಇರುತ್ತಿತ್ತು."[3]

ಮತ್ತು ಬೈಬಲ್‌ನ ನಿಯಮಗಳ ಪುಸ್ತಕವಾಗಿದ್ದರೆ, ಅದರ ಆಕಾರವು ಬೇರೆಯಾಗಿರುತ್ತಿತ್ತು. ಬೈಬಲಿನ ಒಂದು ಭಾಗವನ್ನು ನಿಯಾಮಾವಳಿಗಳಿಗೆ ಮೀಸಲಾಗಿ ಇಡಲಾಗುತ್ತಿತ್ತು (ಅದರಲ್ಲಿ ಬಹಳಷ್ಟು ಭಾಗ, ಎಲ್ಲವೂ ಅಲ್ಲ, ವಿಮೋಚನಕಾಂಡದಿಂದ ಯಾಜಕಕಾಂಡದಿಂದ, ಅರಣ್ಯಕಾಂಡದಿಂದ, ಮತ್ತು ಧರ್ಮೋಪದೇಶಕಾಂಡದಿಂದ). ಇದಕ್ಕೆ ವ್ಯತಿರಿಕ್ತವಾಗಿ ಕೆಲವರು ಇಂಥ ವಿಭಜನೆಯ ಪುಟಗಳನ್ನು ಹೊಂದಿರುವರು, ಅದರಲ್ಲಿ ಕೆಲವು ಪುಟಗಳು ಇಂಥ ನಿಯಮಗಳಿಗೆ ಮೀಸಲಾಗಿದೆ. ಅದರಲ್ಲಿನ ಬಹಳಷ್ಟು ಭಾಗವನ್ನು ಕಥನ, ಪದ್ಯ, ಹಾಗೂ ಪತ್ರಿಕೆಗಳಾಗಿ ಭಾಗ ಮಾಡಲಾಗಿದೆ. ಇದರಲ್ಲಿ ಕೆಲವು ಸಾರಿ ಕಟ್ಟಳೆಗಳನ್ನು ತಿಳಿಸಲಾಗಿದೆ; ಆದರೆ, ಸಾಧಾರಣವಾಗಿ ಮಾತಿನಲ್ಲಿ ಅವುಗಳಲ್ಲಿ ಯಾವುದೆ ವಿಧವಾದ ನಿಯಮಗಳಿಲ್ಲ. ದೇವರು ಈ ವಿಧದಲ್ಲಿ ತನ್ನ ಚಿತ್ರವನ್ನು ಪ್ರಕಟಿಸುವಲ್ಲಿ ಬೈಬಲಿನಲ್ಲಿ ಯಾವ ಆಕಾರದಲ್ಲಿ ಇರಬೇಕೆಂದು ಉದ್ದೇಶ ಹೊಂದಿರುವನು.

ಅಂತಿಮವಾಗಿ, ಬೈಬಲಿನ ಕೇವಲ ನಿಯಮಗಳ ಪುಸ್ತಕವಾಗಿದ್ದರೆ, ಅದು ದೇವರನ್ನು ಬೇರೆ ರೀತಿಯಲ್ಲಿ ಬಿಂಬಿಸುತ್ತಿತ್ತು. ಮೂರನೆ ವ್ಯಕ್ತಿಯ ಮೂಲಕವಾಗಿ ಅದರ ಮುಂದಾಲೋಚನೆಗಳನ್ನು ನವು ಅರಿಯಬೇಕಿತ್ತು. ಅಲ್ಲಿ ಆತನು ಅಬ್ರಹಾಮನೊಂದಿಗೆ, ಯಾಕೋಬನೊಂದಿಗೆ, ಮೋಶೆಯೊಂದಿಗೆ, ದಾವೀದನೊಂದಿಗೆ, ಮತ್ತು ಪೌಲನೊಂದಿಗೆ ಹೊಂದಿದ್ದಂತ ಸಂಬಂಧವನ್ನು ತೋರಿಸುತ್ತದೆ. ಅದನ್ನು ನಿಯಮದ ಪುಸ್ತಕವೆಂದು ದೇವರು ನೀಡಿರುವುದಾದರೆ, ಆ ಪುಸ್ತಕದ ಪ್ರತಿಯೊಂದು ಭಾಗವು ದಶಾಜ್ಞೆಗಳಂತೆ ಇರುತ್ತಿತ್ತು (ವಿಮೋಚನಕಾಂಡ 20:1-17, 23-26; ಧರ್ಮೋಪದೇಶಕಾಂಡ 5:6-21). ದೇವರು ಅಲ್ಲಿ ಪ್ರಥಮ ವ್ಯಕ್ತಿಯ ಸ್ಥಾನದಲ್ಲಿ ನಿಂತು ಕಾಣಿಸಿಕೊಳ್ಳುತ್ತಿದ್ದನು, ಆತನು ಏನು ಮಾಡಿರುವವನು ಎಂದು ನೆನಪಿಸುತ್ತಿದ್ದನು, ನಂತರ, ಆತನನ್ನು ಅನುಸರಿಸಲು ನಿಯಮಗಳನ್ನು ನೀಡುತ್ತಿದ್ದನು. ಆದರೆ

ಆತನ ವಾಕ್ಯಗಳು ಈ ಮಾರ್ಗವನ್ನು ಹಿಡಿಯದೆ ದೇವರ ಆಲೋಚನೆಗಳನ್ನು ಪ್ರಕಟಿಸಿ ಬೈಬಲನ್ನು ಗ್ರಹಿಸುವಂತೆ ಮಾಡುತ್ತದೆ.

## ಮುಕ್ತಾಯ

ಮಾನವರಾದಂತ ನಾವು ಜ್ಞಾನವುಳ್ಳ ಆಲೋಚನೆಯನ್ನು ಹೊಂದಿರುವದರಿಂದ ದೇವರು ತಿಳಿಯಬಯಸುವ ಸಂಗತಿಗಳನ್ನು ಗ್ರಹಿಸಿಕೊಳ್ಳಲು ಶಕ್ತರಾಗಿದ್ದೇವೆ. ಬೈಬಲ್‌ನ ಸ್ವಭಾವದಿಂದ ಬೈಬಲ್ ದೇವರಿಂದ ಬಂದ ಪ್ರಕಟಣೆ ಎಂದು ಅರಿಯುತ್ತೇವೆ. ದೇವರನ್ನು ನಾವುಗಳು ಅರಿಯಬೇಕೆಂದು, ಆತನೊಂದಿಗಿನ ಅನ್ಯೋನ್ಯತೆಗಾಗಿ ದೇವರು ಈ ಪ್ರಕಟಣೆಯನ್ನು ನೀಡಿರುವನು ಎಂದು ಒತ್ತಿ ಹೇಳಲಾಗಿದೆ. ದೇವರ ಹಾಗೆ ಇರಬೇಕೆಂಬ ನಿರ್ಣಯವನ್ನು ನಾವು ಮಾಡುವಾಗ ಈ ಸಂಬಂಧದಲ್ಲಿ ನಾವು ಜೀವಿಸಲು ಸಾಧ್ಯವಾಗುತ್ತದೆ.

"ನಿಯಮಗಳನ್ನು ಹುಡುಕುವ" ಸಲುವಾಗಿ ನಾವು ಬೈಬಲ್‌ನ ಅಧ್ಯಯನವನ್ನು ಮಡುತ್ತಿರುವದಿಲ್ಲ, ದೇವರ ಸ್ವಭಾವಕ್ಕೂ ಮತ್ತು ಆತನ ಚಿತ್ತಕ್ಕೂ, ದೇವರ ಹಾಗೆ ಆಗುವದಕ್ಕೂ ಕಲಿಯುವವರಾಗಿದ್ದೇವೆ. ಪರಿಸ್ಥಿತಿಗೆ ಅನುಕೂಲವಾಗುವ ನಿಯಮಗಳನ್ನು ಪಡೆಯುವದಕ್ಕಾಗಿ, ಗ್ರಂಥಗಳನ್ನು ಅಭ್ಯಾಸಮಾಡುತ್ತಿರುವದಿಲ್ಲ. ಅದರ ಬದಲಾಗಿ, "ಕಥೆಯ ನೈತಿಕತೆಯನ್ನು ಅರಿತು" ಮತ್ತು ಸರಿಯಾದ ಬದುಕಿನ ನಿರ್ಣಯಕ್ಕಾಗಿ ದೇವರ ಸತ್ಯವನ್ನು ಕಂಡುಹಿಡಿದು ಅದನ್ನು ಜೀವಿತಕ್ಕೆ ಅಳವಡಿಸಿ ಕೊಳ್ಳಬಾರದು ಎಂಬುದಾಗಿ ಇರುವದಿಲ್ಲ. "ನಮಗೆ ಸರಿಕಾಣುವ ಸತ್ಯವನ್ನು ಹುಡುಕುವ" ಹೊಣೆಯನ್ನು ನೀಡಿರುವದಿಲ್ಲ.[4] ದೇವರು ಸತ್ಯವನ್ನು ಪ್ರಕಟಿಸಿರುವನು. ನಾವು ಸತ್ಯವನ್ನು ಹೊಂದಿ, ಅದನ್ನು ನಮ್ಮ ಜೀವಿತಕ್ಕೆ ಅಳವಡಿಸಿಕೊಳ್ಳಬೇಕು.

---

ಟಿಪ್ಪಣಿಗಳು

[1]ದೇವರು ನಮ್ಮೊಂದಿಗೆ ಸಂಬಂಧವನ್ನು ಬಯಸುತ್ತಾನೆ, ಯಂತ್ರಮಾನವನಂತೆ ನಿಯಮಗಳನ್ನು ಪಾಲಿಸುವ ರೀತಿಯಲ್ಲಿ ಇರುವದಿಲ್ಲ. ರೋಮಾಪುರ 3:23ರಲ್ಲಿ ಪೌಲನು ಪಾಪದ ಕುರಿತು ವಿವರಿಸಿರುವನು - ಎಲ್ಲರೂ ಪಾಪಮಾಡಿ "ದೇವರ ಮಹಿಮೆಯನ್ನು ಹೊಂದಿರುವದಿಲ್ಲ." ದೇವರ ಸ್ವಭಾವವನ್ನು ಪ್ರಚುರಪಡಿಸಿತೆ ವಿನಃ ಆತನ ನಿಯಮಗಳನ್ನಲ್ಲ. ಪಾಪ ಮಾಡುವಾಗ, ದೇವರ ಒಂದು ಭಾಗವನ್ನು ನಾವು ಕಳೆದುಕೊಳ್ಳುತ್ತೇವೆ, ಪಾಪದಿಂದ ಬಿಡುಗಡೆ ಅಂದರೆ, ದೇವರ ಸ್ವಭಾವಕ್ಕೆ ಸೇರುವುದೇ, ಆದುದರಿಂದ ಪಾಪವನ್ನು ಜಯಿಸಬೇಕು. ಆತನನ್ನು ತಿಳಿದು ಆತನಂತೆ ಆಗುವುದು ದೇವರ ಉದ್ದೇಶ. [2]ಕೇಬಲ್ ದೂರದರ್ಶನವು ಹೊಸದಾಗಿ ಪರಿಚಯವಾದಾಗ ನನ್ನ ಸ್ನೇಹಿತನು ಕೆಲವು ಪ್ರೀಮಿ ಯಮ್‌ಗಳನ್ನು ಉಚಿತವಾಗಿ ಪಡೆದನು. ಆ ಕ್ರಿಯೆಯಲ್ಲಿ ಯಾವುದೇ ಪ್ರಮಾದವು ಇರುವದಿಲ್ಲವೆಂದು, ಕೇಬಲ್ ಕಂಪನಿಯವರು ತಳಿಸ್ಸಿದ್ದರು. ಆದಾಗ್ಯೂ ಅದನ್ನು ಅವನು ಮಾಡಬಾರದಿತ್ತು. (ಗಂಭೀರ ನಿಯಮಗಳಿವೆ.) ಬೈಬಲಿನಲ್ಲಿ ಹಣವಿಲ್ಲದೆ ನೀನು ಕೇಬಲ್ ಪ್ರೀಮಿ ಯಮ್‌ನ್ನು ಪಡೆಯಬಾರದು ಎಂಬ ಕಟ್ಟಳೆಯು ಇಲ್ಲದೆ ಇದ್ದರೂ ಅದು ದೇವರ ನಿಯಮಕ್ಕೆ ವಿರುದ್ಧ ವಾದ ಕಳ್ಳತನವಾಗಿರುತ್ತದೆ. [3]Quoted in Cecil May, Jr., "Instrumental Music: Faith or Opinion," *Freed-Hardeman University Preachers and Church Workers Forum* (1991): 17. [4]ಮುಂದಿನ ನವೀನತೆಯ ತತ್ವ ಸಂಬಂಧಿತ - ಸತ್ಯವು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತದೆ, ಸಂದರ್ಭಕ್ಕನು ಗುಣವಾಗಿರುತ್ತದೆ. ಕೆಲವರು ಅದು ಸಂದರ್ಭಕ್ಕನುಗುಣವಾಗಿರುವದಿಲ್ಲ ಎಂದು ನಂಬುತ್ತಾರೆ. ಇದು ಸ್ವಾರ್ಥವಾಗಿರುತ್ತದೆ. ನನಗರ್ಥವಾಗುವದನ್ನು ಮಾತ್ರ ಮಾತನಾಡಿದರೆ ಆ ವಾಕ್ಯದ ಭಾಗವು ಒಂದು ವಿಷಯವಾಗುತ್ತದೆ. ಅದು ಒಬ್ಬನಿಗೆ ಒಳ್ಳೆಯ ಅರ್ಥ ಇನ್ನೊಬ್ಬನಿಗೆ ವಿರೋಧ ಅರ್ಥವಾಗಿರುತ್ತದೆ. ಹೇಗೂ ಇಬ್ಬರು ಸರಿಯಾಗಿರುತ್ತಾರೆ, ಅದು ಸಹ ತಪ್ಪಾಗಿರುತ್ತದೆ. ಎಲ್ಲದಕ್ಕೂ ನಿಯಮವಿಲ್ಲ ವೆಂಬುವುದು, ಎಲ್ಲದರಲ್ಲಿಯೂ ಸತ್ಯವಿಲ್ಲ ಎಂಬುದಾಗಿ ಇರುವದಿಲ್ಲ ಸತ್ಯವು ಪ್ರಕಟಗೊಂಡಿದೆ. ಅದು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುವದಿಲ್ಲ. ಆ ಸತ್ಯವನ್ನು ಸರಿಯಾಗಿ ಅರ್ಥಮಾಡಿಕೊಂಡರೆ ನೀನು ತಿಳಿದಿರುವ ಸತ್ಯವು ಇತರರ ಸತ್ಯವಾಗಿರುತ್ತದೆ.